ಜೆಎಸ್‌ಎಸ್ ಮಹಾವಿದ್ಯಾಪೀಠ

**ಜೆಎಸ್‌ಎಸ್ ಪದವಿಪೂರ್ವ ಕಾಲೇಜು**

(ಪದವಿಪೂರ್ವ ಶಿಕ್ಷಣ ಇಲಾಖೆಯ ಮಾನ್ಯತೆ ಪಡೆದಿದೆ)

ಊಟಿರಸ್ತೆ, ಮೈಸೂರು-570 025, ಕರ್ನಾಟಕ

JSS COLLEGE OF ARTS, COMMERCE & SCIENCE OOTY ROAD, MYSORE

1916 H.H. Jagadguru Dr. Sri Shivarathri Rajendra Mahaswamiji 2015 Centenary Celebrations

☎0821-2548237 ಕಾಲೇಜು ಸಂಕೇತ ಸಂಖ್ಯೆ NN016 Website: www.jsspucmain.org E-mail jsspuc@gmail.com


ದಿ: 12-01-2016

# ಪ್ರಕಟಣೆಯ ಕೃಪೆಗಾಗಿ

"ನಮ್ಮ ದೇಶದ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚಾರ-ವಿಚಾರಗಳ ಬಗ್ಗೆ ಇಂದಿನ ಯುವಜನತೆ ಹಾಸ್ಯಾಸ್ಪದ ಮನೋಭಾವ ತಳೆಯುವಂತಾಗಲು ಶಿಕ್ಷಣಕ್ಷೇತ್ರದ ಉದ್ದೇಶಗಳು ದಿಕ್ಕುತಪ್ಪಿರುವುದೇ ಕಾರಣ. ನೆಲದ ಧರ್ಮ-ಸಂಸ್ಕೃತಿ, ಆಚಾರವಿಚಾರಗಳು, ಜೀವನಮೌಲ್ಯಗಳ ಬಗ್ಗೆ ಮಕ್ಕಳಲ್ಲಿ ನಂಬಿಕೆ-ಶ್ರದ್ಧೆ-ಅಭಿಮಾನಗಳನ್ನು ಬೆಳೆಸುವುದು ಶಿಕ್ಷಣದ ಗುರಿಯಾಗಬೇಕು" ಎಂದು ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಸಹಪ್ರಾಧ್ಯಾಪಕರಾದ ಶ್ರೀ ಡಾ.ಬಿ.ವಿ.ವಸಂತಕುಮಾರ್ ಅಭಿಪ್ರಾಯಪಟ್ಟರು.

ನಗರದ ಊಟಿರಸ್ತೆಯಲ್ಲಿರುವ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನಲ್ಲಿ ಜನವರಿ 12ರಂದು ಏರ್ಪಡಿಸಿದ್ದ ಕಾಲೇಜಿನ 2015-16ರ ಸಾಲಿನ ಕಲೆ, ಕ್ರೀಡೆ ಮತ್ತು ಸಾಂಸ್ಕೃತಿಕ ವೇದಿಕೆಗಳ ಸಮಾರೋಪ ಸಮಾರಂಭದಲ್ಲಿ ಮುಖ್ಯಭಾಷಣಕಾರರಾಗಿ ಅವರು ಮಾತನಾಡಿದರು.

"ಹೆಚ್ಚು ಹೆಚ್ಚು ಹಣ ಸಂಪಾದಿಸಲು ಸಾಧ್ಯವಾಗುವ ಉದ್ಯೋಗಗಳನ್ನು ಪಡೆಯುವುದೇ ಇಂದಿನ ಶಿಕ್ಷಣದ ಗುರಿಯಾಗಿಬಿಟ್ಟಿದೆ. ಅಂತಃಸ್ಥೈರ್ಯದ ಕೊರತೆಯಿಂದ ವಿದ್ಯಾರ್ಥಿಗಳು ಪರೀಕ್ಷೆಯ ಫಲಿತಾಂಶ ಬರುವುದಕ್ಕೂ ಮುನ್ನವೇ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ತಂದೆತಾಯಿ, ಗುರುಹಿರಿಯರ ಬಗ್ಗೆ ಯುವಕರಲ್ಲಿ ಗೌರವ ಕಡಿಮೆಯಾಗುತ್ತಿದೆ. ಧಾರ್ಮಿಕ ಹಾಗೂ ನೈತಿಕ ದಿವಾಳಿತನದಿಂದ ಪಠಾಣ್‌ಕೋಟ್ ಉಗ್ರರ ದಾಳಿ, ಏಳು ವರ್ಷದ ಬಾಲೆಯ ಮೇಲಿನ ಅತ್ಯಾಚಾರದಂತಹ ವಿಷಯಗಳು ನಮ್ಮನ್ನು ತಟ್ಟುತ್ತಿಲ್ಲ. ಜಾಗೃತರನ್ನಾಗಿಸುತ್ತಿಲ್ಲ" ಎಂದು ಖೇದ ವ್ಯಕ್ತಪಡಿಸಿದರು.

"ಜಗತ್ತಿನಲ್ಲಿಯೇ ಅತಿಹೆಚ್ಚು ಯುವಜನರನ್ನು ಹೊಂದಿರುವ ನಮ್ಮ ದೇಶದಲ್ಲಿ ಶಕ್ತಿಯ ಕೊರತೆಯಿಲ್ಲ. ಆದರೆ ಅದು ಕೇಂದ್ರೀಕೃತವಾಗಿಲ್ಲ. ಆ ಶಕ್ತಿಯನ್ನು ಕೇಂದ್ರೀಕೃತಗೊಳಿಸುವುದು ಶಿಕ್ಷಣದ ಗುರಿಯಾಗಬೇಕು. ಕೇಂದ್ರೀಕೃತಗೊಂಡ ಶಕ್ತಿಯನ್ನು ಸರಿಯಾದ ರೀತಿಯಲ್ಲಿ ಒಳ್ಳೆಯ ಕೆಲಸಗಳಿಗೆ ಬಳಸಿಕೊಳ್ಳುವಂತಾಗಲು ಧಾರ್ಮಿಕತೆಯ ಅವಶ್ಯಕತೆಯಿದೆ" ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದ ಮೈಸೂರು ಮಹಾನರಗರಪಾಲಿಕೆ ಮಹಾಪೌರರಾದ ಶ್ರೀ ಬಿ.ಎಲ್.ಭೈರಪ್ಪನವರು ಮಾತನಾಡಿ "ವಿದ್ಯಾರ್ಥಿಗಳಿಗೆ ತಮ್ಮ ನಡೆನುಡಿಗಳ ಬಗ್ಗೆ ಅರಿವಿರಬೇಕು. ಉತ್ತಮವಾದ ಕನಸುಗಳನ್ನು ಕಟ್ಟಿಕೊಳ್ಳಬೇಕು. ಅವುಗಳ ಸಾಕಾರಕ್ಕಾಗಿ ಶ್ರಮಿಸಬೇಕು" ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮಕ್ಕೆ ಮುಖ್ಯಅತಿಥಿಯಾಗಿ ಆಗಮಿಸಿದ್ದ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ಕೆ.ಎಂ.ಪುಟ್ಟು ಮತ್ತು ರಾಷ್ಟ್ರೀಯ ಕ್ರೀಡಾಪಟು ಶ್ರೀ ಬಿ.ಶ್ರೀಕಾಂತ್ ವಿವಿಧ ರಂಗಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಿ ತಮ್ಮ ಅನುಭವ ಹಂಚಿಕೊಂಡರು.

ಜೆಎಸ್‌ಎಸ್ ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಬಿ.ವಿ. ಸಾಂಬಶಿವಯ್ಯನವರು ಮಾತನಾಡಿ "ಪದವಿ ಶಿಕ್ಷಣ ಪೂರೈಸಿದ ಇಂದಿನ ಬಹುಪಾಲು ವಿದ್ಯಾರ್ಥಿಗಳಲ್ಲಿ ಕೌಶಲ್ಯದ ಕೊರತೆ ಎದ್ದು ಕಾಣುತ್ತಿದೆ. ಈ ಕೊರತೆಯನ್ನು ನೀಗಿಸಲು ಕೇಂದ್ರ ಸರ್ಕಾರ ದೇಶಾದ್ಯಂತ ವಿವಿಧ ಕಾಲೇಜುಗಳಲ್ಲಿ ಕೌಶಲ್ಯಾಧಾರಿತ ಪದವಿಕೋರ್ಸುಗಳನ್ನು ಪ್ರಾರಂಭಿಸಿದೆ. ಜೆಎಸ್‌ಎಸ್ ಕಾಲೇಜು ಅಂತಹ ಕೋರ್ಸುಗಳನ್ನು ಹೊಂದಿರುವ ಕೆಲವೇ ಕಾಲೇಜುಗಳಲ್ಲಿ ಒಂದಾಗಿದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಉತ್ತಮ ಉದ್ಯೋಗ ಸಂಪಾದಿಸಲು ಕೌಶಲ್ಯಾಧಾರಿತ ಕೋರ್ಸುಗಳು ಅತ್ಯಗತ್ಯ" ಎಂದು ತಿಳಿಸಿದರು.